ಟೀಂ ಇಂಡಿಯಾ ಎಡವಿದ್ದೆಲ್ಲಿ?

ಬೆಂಗಳೂರು: ಟಿ20 ವಿಶ್ವಕಪ್ ಗೆಲ್ಲುವ ಭರವಸೆ ಮೂಡಿಸಿದ್ದ ಟೀಂ ಇಂಡಿಯಾ ಸೆಮಿಫೈನಲ್ ಪಂದ್ಯದಲ್ಲಿ ಇಂಗ್ಲೆಂಡ್ ವಿರುದ್ಧ ಹೀನಾಯ ಸೋಲು ಕಂಡಿದ್ದು ಏಕೆ?

ಈ ಚರ್ಚೆ ಇದೀಗ ಎಲ್ಲೆಡೆ ತೀವ್ರಗೊಂಡಿದೆ. ರೋಹಿತ್ ಶರ್ಮಾ ಮತ್ತು ಕೆಎಲ್ ರಾಹುಲ್ ಅವರ ಫ್ಲಾಪ್ ಶೋ, ವಿರಾಟ್ ಕೊಹ್ಲಿ ಅವರ ನಿಧಾನಗತಿಯ ಬ್ಯಾಟಿಂಗ್ ಸೋಲಿಗೆ ಕಾರಣ. ಇದರಿಂದಾಗಿ ಕಳೆದ ವರ್ಷದ ಕಥೆಯನ್ನು ಪುನರಾವರ್ತಿಸಿಕೊಂಡು ಸೆಮಿಫೈನಲ್‌ನಲ್ಲಿ ಸೋತಿದೆ. ಒಂದೆಡೆ ಕಳೆದ ವರ್ಷ ಪಾಕಿಸ್ತಾನದ ಎದುರು ಭಾರತ 10 ವಿಕೆಟ್‌ಗಳ ಹೀನಾಯ ಸೋಲನ್ನು ಎದುರಿಸಬೇಕಾಗಿದ್ದರೆ, ಭಾರತ ಮತ್ತು ಇಂಗ್ಲೆಂಡ್ ನಡುವೆ ನಡೆದ ಎರಡನೇ ಸೆಮಿಫೈನಲ್ ಪಂದ್ಯದಲ್ಲಿ ಟೀಂ ಇಂಡಿಯಾ 10 ವಿಕೆಟ್‌ಗಳ ಹೀನಾಯ ಸೋಲನ್ನು ಎದುರಿಸಬೇಕಾಯಿತು.

ಅಗ್ರಕ್ರಮಾಂಕದ ನಿರಾಸೆ: ಭಾರತದ ಅಗ್ರ ಕ್ರಮಾಂಕ ಮತ್ತೊಮ್ಮೆ ನಿರಾಶಾದಾಯಕ ಪ್ರದರ್ಶನ ನೀಡಿದೆ. ಬೇಗನೆ ಔಟಾಗಿ ಕೆಎಲ್ ರಾಹುಲ್ ಮತ್ತು ರೋಹಿತ್ ಪೆವಿಲಿಯನ್‌ಗೆ ಮರಳಿದರೆ, ಮತ್ತೊಂದೆಡೆ, ಎರಡನೇ ಇನ್ನಿಂಗ್ಸ್‌ನಲ್ಲಿ ಭಾರತ ತಂಡದ ಎಲ್ಲ ಬೌಲರ್‌ಗಳು ಇಂಗ್ಲೆಂಡ್ ಆರಂಭಿಕರಾದ ಬಟ್ಲರ್ ಮತ್ತು ಹೇಲ್ಸ್ ಅವರ ಮುಂದೆ ಸಂಪೂರ್ಣವಾಗಿ ಅಸಹಾಯಕರಾಗಿ ಕಾಣುತ್ತಿದ್ದರು.

ಕಳಪೆ ಬೌಲಿಂಗ್: ಇದಕ್ಕೆ ಕಾರಣ ಭಾರತದ ಬೌಲರ್‌ಗಳು ಇಂಗ್ಲೆಂಡ್‌ನ ಒಂದೇ ಒಂದು ವಿಕೆಟ್ ಪಡೆಯುವಲ್ಲಿ ವಿಫಲರಾಗಿದ್ದಾರೆ. ಅಷ್ಟೇ ಅಲ್ಲ ಕೇವಲ 16 ಓವರ್‌ಗಳಲ್ಲಿ ತಂಡದ ಬೌಲರ್‌ಗಳು ಸಂಪೂರ್ಣ ಮಂಡಿಯೂರಿ ಬೌಲರ್‌ಗಳೆಲ್ಲರನ್ನೂ ಹೀನಾಯವಾಗಿ ಕಾಡಿದರು.

ಮಂಗಳೂರಿನಲ್ಲಿ ರಾಷ್ಟ್ರಮಟ್ಟದ ಬ್ಯಾಡ್ಮಿಂಟನ್ ಟೂರ್ನಿ

ಮಂಗಳೂರು: ವಿವಾ ವೆಂಚರ್ಸ್ ಕ್ರೀಡಾ ಸಂಸ್ಥೆಯ ಸಹಯೋಗದಲ್ಲಿ ಸ್ಪೋರ್ಟ್ಸ್ ಡೆನ್ ಆಯೋಜಿಸಲಿರುವ ಅಖಿಲ ಭಾರತ ಓಪನ್ ಬ್ಯಾಡ್ಮಿಂಟನ್ ಟೂರ್ನಿ ಡಿಸೆಂಬರ್ 9, 10, 11ರಂದು ನಗರದಲ್ಲಿ ನಡೆಯಲಿದೆ.

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಯು.ಎಸ್ ಮಲ್ಯ ಅಂಗಣದಲ್ಲಿ ನಡೆಯಲಿರುವ ಟೂರ್ನಿಯಲ್ಲಿ 9ರಿಂದ 65 ವರ್ಷದ ವರೆಗಿನವರು ವಿಭಿನ್ನ ವಯೋಮಾನ ವಿಭಾಗಗಳಲ್ಲಿ ಸ್ಪರ್ಧಿಸಲಿದ್ದಾರೆ ಎಂದು ಸ್ಪೋರ್ಟ್ಸ್ ಡೆನ್ ಸಂಸ್ಥೆಯ ನಿರ್ದೇಶಕ ಗಣೇಶ್ ಕಾಮತ್ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು. ಎಲ್ಲ ವಯೋಮಾನದಲ್ಲೂ ಬಾಲಕ-ಬಾಲಕಿಯರು, ಪುರುಷ- ಮಹಿಳೆಯರ ವಿಭಾಗಗಳಲ್ಲಿ ಸಿಂಗಲ್ಸ್, ಡಬಲ್ಸ್ ಮತ್ತು ಮಿಶ್ರ ಡಬಲ್ಸ್ ಸ್ಪರ್ಧೆಗಳು ನಡೆಯಲಿವೆ. ಒಟ್ಟು 2 ಲಕ್ಷ ಮೊತ್ತದ ನಗದು ಬಹುಮಾನ, ಟ್ರೋಫಿ ಮತ್ತು ಪದಕಗಳನ್ನು ನೀಡಲಾಗುವುದು ಎಂದು ವಿವರಿಸಿದರು. ಹರ್ಕುಲಿಸ್ ಎಂಬ ತಂಡ ವಿಭಾಗದಲ್ಲಿ ಎರಡು ಸಿಂಗಲ್ಸ್ ಮತ್ತು ಒಂದು ಡಬಲ್ಸ್ ಹಣಾಹಣಿ ನಡೆಯಲಿದೆ. ಪ್ರವೇಶ ಪತ್ರಗಳನ್ನು 8884409014 ಅಥವಾ 8095810030ಗೆ ಕಳುಹಿಸಬೇಕು. ತಿಳಿಸಿದರು. ವಿವಾ ವೆಂಚರ್ಸ್‌ನ ನಿರ್ದೇಶಕ ಡೆನ್ನಿಲ್ ಫರ್ನಾಂಡಿಸ್ ಪತ್ರಿಕಾಗೋಷ್ಠಿಯಲ್ಲಿ ಇದ್ದರು.

ಸಿರಿಧಾನ್ಯಗಳ ರಫ್ತು ಉತ್ತೇಜನ

ದೆಹಲಿ: ಸಿರಿಧಾನ್ಯಗಳ ರಫ್ತು ಉತ್ತೇಜನಕ್ಕೆ ಕೇಂದ್ರ ಸರಕಾರವು ಬೇರೆ ಬೇರೆ ದೇಶಗಳಲ್ಲಿ ಭಾರತೀಯ ರಾಯಭಾರ ಕಚೇರಿಗಳ ನೆರವು ಪಡೆಯುವ ಯೋಜನೆ ರೂಪಿಸಿದೆ. ಈ ಯೋಜನೆಯ ಭಾಗವಾಗಿ ಕೇಂದ್ರವು, ಜಾಗತಿಕ ಮಟ್ಟದಲ್ಲಿ ರಿಟೇಲ್ ಸೂಪರ್‌ಮಾರ್ಕೆಟ್ ಹೊಂದಿರುವ ವಾಲ್‌ಮಾರ್ಟ್ ಹಾಗೂ ಕಾರುಫಾ ಕಂಪನಿಗಳ ನೆರವನ್ನೂ ಪಡೆಯಲಿದೆ.

ದೇಶಿ ಸಿರಿಧಾನ್ಯಗಳ ಬ್ರ್ಯಾಂಡಿಂಗ್ ಮತ್ತು ಪ್ರಚಾರ ಕಾರ್ಯಗಳಿಗೆ ವಿದೇಶಗಳಲ್ಲಿನ ರಾಯಭಾರ ಕಚೇರಿಗಳ ಸಹಾಯ ಪಡೆಯಲಾಗುತ್ತದೆ. ಸಿರಿಧಾನ್ಯಗಳನ್ನು ಖರೀದಿಸುವ ದೊಡ್ಡ ಅಂಗಡಿಗಳು, ಸೂಪರ್‌ಮಾರ್ಕೆಟ್, ಹೈಪರ್‌ಮಾರ್ಕೆಟ್‌ಗಳನ್ನು ಗುರುತಿಸಲು ಸೂಚಿಸಲಾಗುತ್ತದೆ.

ರಫ್ತು ಉತ್ತೇಜನಾ ಕಾರ್ಯತಂತ್ರದ ಭಾಗವಾಗಿ ಲುಲು ಸಮೂಹ, ಕಾರುಫಾ, ಅಲ್ ಜಜೀರಾ, ಅಲ್ ಮಯ, ವಾಲ್‌ಮಾರ್ಟ್ ಕಂಪನಿಗಳ ಜೊತೆ ಒಪ್ಪಂದ ಮಾಡಿಕೊಂಡು, ಅವುಗಳಲ್ಲಿ ಸಿರಿಧಾನ್ಯಗಳು ಲಭ್ಯವಿರುವಂತೆ ಮಾಡಲಾಗುತ್ತದೆ ಎಂದು ವಾಣಿಜ್ಯ ಸಚಿವಾಲಯದ ಹೇಳಿಕೆ ತಿಳಿಸಿದೆ. ಯಾವ ದೇಶಗಳಲ್ಲಿ ಸಿರಿಧಾನ್ಯಗಳ ಮಾರಾಟಕ್ಕೆ ಗಮನ ನೀಡಲಾಗುತ್ತದೆಯೋ ಆ ದೇಶಗಳ ಭಾರತದಲ್ಲಿನ ರಾಯಭಾರಿಗಳನ್ನು ಸಿರಿಧಾನ್ಯ ಆಧಾರಿತ ಉತ್ಪನ್ನಗಳ ಪ್ರದರ್ಶನಕ್ಕೆ ಆಹ್ವಾನಿಸಲಾಗುತ್ತದೆ. ಸಿರಿಧಾನ್ಯಗಳ ರಫ್ತು ಉತ್ತೇಜನ ಪ್ರಯತ್ನವು ಡಿಸೆಂಬರ್‌ನಿಂದ ಶುರುವಾಗಲಿದೆ.

ವಿಶ್ವ ಸಂಸ್ಥೆಯ ಸರ್ವಸದಸ್ಯರ ಸಭೆಯಲ್ಲಿ 2023ನೆಯ ಇಸವಿಯನ್ನು 'ಅಂತಾರಾಷ್ಟ್ರೀಯ ಸಿರಿಧಾನ್ಯ ವರ್ಷ' ಎಂದು ಘೋಷಿಸಲಾಗಿದೆ.

ಫುಟ್ಬಾಲ್: ರೆಬೆಲ್ಸ್‌ಗೆ ಗೆಲುವು

ಬೆಂಗಳೂರು: ಉತ್ತಮ ಆಟವಾಡಿದ ರೆಬೆಲ್ಸ್ ಎಫ್‌ಸಿ ಆಟಗಾರರು ಬಿಡಿಎಫ್‌ಎ ಸೂಪರ್ ಡಿವಿಷನ್ ಲೀಗ್ ಫುಟ್ಬಾಲ್ ಟೂರ್ನಿಯಲ್ಲಿ ಗೆಲುವು ಸಾಧಿಸಿದರು.

ಬೆಂಗಳೂರು ಫುಟ್ಬಾಲ್ ಕ್ರೀಡಾಂಗಣದಲ್ಲಿ ಸೋಮವಾರ ನಡೆದ ಪಂದ್ಯದಲ್ಲಿ ರೆಬೆಲ್ಸ್ 30ಯಿಂದ ಎಎಸ್‌ಸಿ8 ಸೆಂಟರ್ ಎಫ್‌ಸಿ ತಂಡವನ್ನು ಪರಾಭವಗೊಳಿಸಿತು.

ಮಾನ್ಯ ಗೌರವಾನ್ವಿತ ಪ್ರಧಾನ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮಾಲೂರು

CMC No. 177/2022

ನಡುವಣ

1.ಶ್ರೀಮತಿ ಪುಟ್ಟಮ್ಮ ಕೋಂ ಲೇಟ್ ಎಂ.ಕೃಷ್ಣಪ್ಪ ವಯಸ್ಸು 70 ವರ್ಷ, 2. ಕೆ.ನಾರಾಯಣಸ್ವಾಮಿ ಬಿನ್ ಲೇಟ್ ಎಂ.ಕೃಷ್ಣಪ್ಪ ವಯಸ್ಸು-43 ವರ್ಷ, 3.ಕೆ.ಪದ್ಮಾವತಿ ಬಿನ್ ಲೇಟ್ ಎಂ.ಕೃಷ್ಣಪ್ಪ ವಯಸ್ಸು- 48 ವರ್ಷ, 4.ಕೆ.ಮಮತ ಬಿನ್ ಲೇಟ್ ಎಂ.ಕೃಷ್ಣಪ್ಪ, ವಯಸ್ಸು-38 ವರ್ಷ

Persent address R/at Gandhi Puram Behind District Collector, Thirpathura Thirpathura (dt) Tamilnadu.

ಎಲ್ಲರೂ ವಾಸ: ಅರಳೇರಿ ಗ್ರಾಮ, ಮಾಲೂರು ತಾಲ್ಲೂಕು, ಕೋಲಾರ ಜಿಲ್ಲೆ.

... ಅರ್ಜಿದಾರರು

ಮತ್ತು

ತಹಸೀಲ್ದಾರ್‌ರವರು ಮಾಲೂರು ತಾಲ್ಲೂಕು, ಮಾಲೂರು.

...ಎದುರುದಾರರು

ಸಾರ್ವಜನಿಕ ಪ್ರಕಟಣೆ

ಈ ಮೂಲಕ ತಿಳಿಯಪಡಿಸುವುದೇನೆಂದರೆ, ಮೇಲ್ಕಂಡ ಪ್ರಕರಣದಲ್ಲಿ ಅರ್ಜಿದಾರರ ನಂ.1 ರವರ ಗಂಡ ಮತ್ತು ಅರ್ಜಿದಾರ 2 ರಿಂದ 4 ರವರ ತಂದೆಯಾದ ಎಂ.ಕೃಷ್ಣಪ್ಪ ಬಿನ್ ಲೇಟ್ ಮುನಿಸ್ವಾಮಿರವರು ದಿನಾಂಕ 18.4.2021 ರಂದು ಅರಳೇರಿ ಗ್ರಾಮ ಮಾಲೂರು ತಾಲ್ಲೂಕು, ಕೋಲಾರ ಜಿಲ್ಲೆಯಲ್ಲಿ ಮರಣ ಹೊಂದಿದ್ದು ಸದರಿಯವರ ಮರಣ ದಿನಾಂಕವನ್ನು ನೋಂದಾಣಿಧಿಕಾರಿಗಳಲ್ಲಿ ನೋಂದಾಯಿಸಿರುವುದಿಲ್ಲ. ಆದುದರಿಂದ ಮೇಲ್ಕಂಡ ಅರ್ಜಿದಾರರು ಸದರಿಯವರ ಮರಣ ಪ್ರಮಾಣ ಪತ್ರವನ್ನು ಪಡೆಯಲು ನೋಂದಣಿ ಅತ್ಯವಶ್ಯಕವಾಗಿರುವುದರಿಂದ ಸದರಿಯವರು ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮಾಲೂರಿನಲ್ಲಿ ಸಿಎಮ್ ಸಿ ನಂ. 177/2022ರಂತೆ ಎದುರುದಾರರ ವಿರುದ್ಧ ಪ್ರಕರಣ/ಅರ್ಜಿಯನ್ನು ಮೇಲ್ಕಂಡ ನ್ಯಾಯಾಲಯದಲ್ಲಿ ಸಲ್ಲಿಸಿದ್ದು, ಸದರಿ ಪ್ರಕರಣವು ದಿನಾಂಕ 12/12/2022ರಂದು ವಿಚಾರಣೆಗೆ ಇದ್ದು ಸದರಿಯವರ ಮರಣ ದಿನಾಂಕದ ಬಗ್ಗೆ ಸಂಬಂದಪಟ್ಟ ಯಾರಿಗಾದರೂ ತಂಟೆ ತಕರಾರುಗಳಿದ್ದಲ್ಲಿ ಸದರಿ ದಿನಾಂಕ ರಂದು ಬೆಳಿಗ್ಗೆ 11.00 ಗಂಟೆಗೆ ಮೇಲ್ಕಂಡ ನ್ಯಾಯಾಲಯದಲ್ಲಿ ಖುದ್ದಾಗಿಯಾಗಲೀ ಅಥವಾ ವಕೀಲರ ಮೂಲಕ ಹಾಜರಾಗಿ ತಕರಾರು ಇದ್ದಲ್ಲಿ ಸಲ್ಲಿಸಲು ತಿಳಿಸಲಾಗಿದೆ. ತಪ್ಪಿದಲ್ಲಿ ಯಾವುದೇ ತಂಟೆ, ತಕರಾರು ಇಲ್ಲವೆಂದು ತಿಳಿದು ಪ್ರಕರಣವನ್ನು ಏಕ ಪಕ್ಷೀಯವಾಗಿ ನಿರ್ಣಯಿಸಲಾಗುವುದು ಎಂದು ತಿಳಿಯವುದು.

ಈ ದಿನ ದಿನಾಂಕ: 10/11/2022 ರಂದು ಸಹಿ ಮತ್ತು ನ್ಯಾಯಾಲಯದ ಸಹಿ ಮತ್ತು ಮೊಹರಿನೊಂದಿಗೆ ನೀಡಲಾಗಿದೆ.

ನ್ಯಾಯಾಲಯದ ಅಪ್ಪಣೆಯ ಮೇರೆಗೆ
ಸಹಿ/-ಶಿರಸ್ತೆದಾರರು
ಅಪರ ಸಿವಿಲ್ ನ್ಯಾಯಾಧೀಶರ
ನ್ಯಾಯಲಯ, ಮಾಲೂರು

ಕುಮಾರಿ, ಗಿರಿಜ ಎನ್.
ವಕೀಲರು, ಮಾಲೂರು
ಅರ್ಜಿದಾರರ ಪರ ವಕೀಲರು.
ಕೋಲಾರ

ವಿಶ್ವಕಪ್ ಟಿ20 ಸೆಮೀಸ್: ಮಕಾಡೆ ಮಲಗಿದ ಭಾರತ

- ಟೀಂ ಇಂಡಿಯಾಗೆ 10 ವಿಕೆಟ್ ಅಂತರದ ಸೋಲು
- ಫೈನಲ್‌ಗೆ ಕೊಂಡೊಯ್ದ ಆಂಗ್ಲರ ಪ್ರಚಂಡ ಬ್ಯಾಟಿಂಗ್

ಅಡಿಲೇಡ್: ಈ ಬಾರಿಯ ಟಿ20 ಕ್ರಿಕೆಟ್ ವಿಶ್ವಕಪ್ ಟೂರ್ನಿಯ ಎರಡನೇ ಸೆಮಿಫೈನಲ್ ಪಂದ್ಯದಲ್ಲಿ ಪ್ರಚಂಡ ಬ್ಯಾಟಿಂಗ್ ನಡೆಸಿದ ಇಂಗ್ಲೆಂಡ್ ಭಾರತದ ವಿರುದ್ಧ 10 ವಿಕೆಟ್ ಅಂತರದ ಸುಲಭ ಜಯ ಸಾಧಿಸಿದೆ.

ಇಲ್ಲಿನ ಓವಲ್ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡುವ ಅವಕಾಶ ಪಡೆದ ಭಾರತ ನಿಗದಿತ 20 ಓವರ್ಗಳಲ್ಲಿ 6 ವಿಕೆಟ್ ನಷ್ಟಕ್ಕೆ 168 ರನ್ ಕಲೆಹಾಕಿತ್ತು. ಈ ಗುರಿ ಬೆನ್ನತ್ತಿದ ಇಂಗ್ಲೆಂಡ್ ಪರ ಆರಂಭಿಕರಾದ ನಾಯಕ ಜಾಸ್ ಬಟ್ಲರ್ ಮತ್ತು ಅಲೆಕ್ಸ್ ಹೇಲ್ಸ್ ಅತ್ಯುತ್ತಮವಾಗಿ ಬ್ಯಾಟ್ ಬೀಸಿದರು. ಭಾರತದ ಬೌಲರ್‌ಗಳೆದುರು ಲೀಲಾಜಾಲವಾಗಿ ಬ್ಯಾಟ್ ಬೀಸಿದ ಈ ಇಬ್ಬರು ತಮ್ಮ ತಂಡಕ್ಕೆ ಇನ್ನೂ 24 ಎಸೆತಗಳು ಬಾಕಿ ಇರುವಂತೆಯೇ ಜಯ ತಂದುಕೊಟ್ಟರು.

ಬಿರುಸಿನ ಬ್ಯಾಟಿಂಗ್:

ಬಿರುಸಿನ ಬ್ಯಾಟಿಂಗ್ ಮಾಡಿದ ಹೇಲ್ಸ್ ಮತ್ತು ಬಟ್ಲರ್ 16 ಓವರ್‌ಗಳಲ್ಲಿ 170 ರನ್ ಕಲೆಹಾಕಿದರು. ಹೇಲ್ಸ್ ಕೇವಲ 47 ಎಸೆತಗಳಲ್ಲಿ 7 ಸಿಕ್ಸರ್ ಮತ್ತು 4 ಬೌಂಡರಿ ಸಹಿತ 89 ರನ್ ಚಚ್ಚಿದ್ದರು. ಅವರಿಗೆ ಉತ್ತಮ ಬೆಂಬಲ ನೀಡಿದ ಬಟ್ಲರ್ 49 ಎಸೆತಗಳಲ್ಲಿ 3 ಸಿಕ್ಸರ್ ಮತ್ತು 9 ಬೌಂಡರಿ ಸಹಿತ 80 ರನ್ ಸಿಡಿಸಿದರು.

ಇದು ಈ ಬಾರಿಯ ವಿಶ್ವಕಪ್‌ನಲ್ಲಿ ಯಾವುದೇ ತಂಡದ ಪರ ಮೊದಲ ವಿಕೆಟ್ ಜೊತೆಯಾಟದಲ್ಲಿ ಬಂದ ಅತ್ಯಧಿಕ ಮೊತ್ತವಾಗಿದೆ. ನ್ಯೂಜಿಲೆಂಡ್ ವಿರುದ್ಧ ನಡೆದ ಮೊದಲ ಸೆಮಿಫೈನಲ್‌ನಲ್ಲಿ ಪಾಕಿಸ್ತಾನದ ನಾಯಕ ಬಾಬರ್ ಅಜಂ ಮತ್ತು ಮೊಹಮ್ಮದ್ ರಿಜ್ವಾನ್ 105 ರನ್ ಗಳಿಸಿದ್ದರು. ಇದು ಎರಡನೇ ಅತ್ಯುತ್ತಮ ಜೊತೆಯಾಟವಾಗಿದೆ. ಟೂರ್ನಿಯ ಫೈನಲ್ ಪಂದ್ಯವು ನವೆಂಬರ್ 13ರಂದು ಮೆಲ್ಬರ್ನ್‌ನಲ್ಲಿ ನಡೆಯಲಿದೆ.

ಈಗಾಗಲೇ ಫೈನಲ್ ತಲುಪಿರುವ ಪಾಕಿಸ್ತಾನ ಮತ್ತು ಇಂಗ್ಲೆಂಡ್ ಪ್ರಶಸ್ತಿಗಾಗಿ ಸೆಣಸಾಡಲಿವೆ.

ಭಾರತದ ವೈಫಲ್ಯ

ಟಾಸ್ ಸೋತರೂ ಮೊದಲು ಬ್ಯಾಟಿಂಗ್ ಮಾಡುವ ಅವಕಾಶ ಪಡೆದ ಭಾರತ ಪರ ಇನಿಂಗ್ಸ್ ಆರಂಭಿಸಿದ ಉಪನಾಯಕ ಕೆ.ಎಲ್.ರಾಹುಲ್ ಕೇವಲ 5 ರನ್ ಗಳಿಸಿ ಔಟಾದರೆ, ನಾಯಕ ರೋಹಿತ್ ಶರ್ಮಾ 27 ಗಳಿಸಿದ್ದಾಗ ವಿಕೆಟ್ ಒಪ್ಪಿಸಿದರು. ಬಳಿಕ ಬಂದ ಸ್ಫೋಟಕ ಬ್ಯಾಟರ್ ಸೂರ್ಯ ಕುಮಾರ್ ಯಾದವ್ (14) ಸಹ ಹೆಚ್ಚು ಹೊತ್ತು ನಿಲ್ಲಲಿಲ್ಲ. ಹೀಗಾಗಿ, ರನ್ ಗಳಿಕೆಗೆ ಕಡಿವಾಣ ಬಿದ್ದಿತು.

ಈ ವೇಳೆ ವಿಕೆಟ್ ಬೀಳದಂತೆ ಎಚ್ಚರಿಕೆಯ ಆಟವಾಡಿದ ಕೊಹ್ಲಿ ಮತ್ತು ಹಾರ್ದಿಕ್ ಪಾಂಡ್ಯ, 4ನೇ ವಿಕೆಟ್ ಪಾಲುದಾರಿಕೆಯಲ್ಲಿ 61 ರನ್ ಕೂಡಿಸಿದರು. ಆರಂಭದಲ್ಲಿ ರಕ್ಷಣಾತ್ಮಕವಾಗಿ ಆಡಿದ ಇವರಿಬ್ಬರೂ ನಿಧಾನವಾಗಿ ರನ್ ಗತಿ ಹೆಚ್ಚಿಸುವ ಪ್ರಯತ್ನ ಮಾಡಿದರು.

ಕೊಹ್ಲಿ, ಪಾಂಡ್ಯ ಮಿಂಚು

ಈ ಟೂರ್ನಿಯಲ್ಲಿ 4ನೇ ಅರ್ಧಶತಕ ಗಳಿಸಿದ ಕೊಹ್ಲಿ, 40 ಎಸೆತಗಳಲ್ಲಿ 50 ರನ್ ಗಳಿಸಿದರೆ, ಪಾಂಡ್ಯ 33 ಎಸೆತಗಳಿಂದ 63 ರನ್ ಬಾರಿಸಿದರು. ಹೀಗಾಗಿ ಟೀಂ ಇಂಡಿಯಾ ಸ್ಪರ್ಧಾತ್ಮಕ ಮೊತ್ತ ಕಲೆಹಾಕಲು ಸಾಧ್ಯವಾಯಿತು.

ಬಳಿಕ ಬೌಲಿಂಗ್‌ನಲ್ಲಿಯೂ ವೈಫಲ್ಯ ಅನುಭವಿಸಿದ ಭಾರತ, ಎದುರಾಳಿ ತಂಡದ ಒಂದೇ ಒಂದು ವಿಕೆಟ್ ಸಹ ಪಡೆಯದೆ ಮುಖಭಂಗ ಅನುಭವಿಸಿತು. ಇಂಗ್ಲೆಂಡ್ ಪರ ಕ್ರಿಸ್ ಜೋರ್ಡನ್ ಮೂರು ವಿಕೆಟ್ ಪಡೆದರೆ, ಕ್ರಿಸ್ ವೋಕ್ಸ್, ಆದಿಲ್ ರಶೀದ್ ತಲಾ ಒಂದೊಂದು ವಿಕೆಟ್ ಕಿತ್ತರು.

ಏಷ್ಯನ್ ಬಾಕ್ಸಿಂಗ್: ಭಾರತದ ಸುಮಿತ್, ಗೋವಿಂದ್‌ಗೆ ಕಂಚು

ನವದೆಹಲಿ: ಭಾರತದ ಸುಮಿತ್ ಮತ್ತು ಗೋವಿಂದ್ ಕುಮಾರ್ ಸಹಾನಿ ಅವರು ಜೋರ್ಡಾನ್‌ನ ಅಮ್ಮಾನ್‌ನಲ್ಲಿ ನಡೆಯುತ್ತಿರುವ ಏಷ್ಯನ್ ಬಾಕ್ಸಿಂಗ್ ಚಾಂಪಿಯನ್‌ಶಿಪ್ ಸೆಮಿಫೈನಲ್‌ನಲ್ಲಿ ಸೋತು, ಕಂಚಿನ ಪದಕ ತಮ್ಮದಾಗಿಸಿಕೊಂಡರು.

ಗುರುವಾರ ನಡೆದ 48 ಕೆ.ಜಿ. ವಿಭಾಗದ ಸೆಮಿಫೈನಲ್ನಲ್ಲಿ ಗೋವಿಂದ್ ಅವರು 04 ರಲ್ಲಿ ಕಜಕಸ್ತಾನದ ಸಂಜಾರ್ ತಾಷ್ಕೆನ್ಬೈ ಕೈಯಲ್ಲಿ ಪರಾಭವಗೊಂಡರು. ಥಾಯ್ಲೆಂಡ್ ಓಪನ್ ಚಾಂಪಿಯನ್ ಆಗಿರುವ ಗೋವಿಂದ್ ರಕ್ಷಣೆಗೆ ಒತ್ತು ನೀಡಿ, ಅವಕಾಶ ಸಿಕ್ಕಾಗ ಎದುರಾಳಿಗೆ ಪಂಚ್ ನೀಡಿದರು. ಆದರೆ 2021ರ ವಿಶ್ವ ಯೂತ್ ಕೂಟದಲ್ಲಿ ಚಿನ್ನ ಗೆದ್ದಿರುವ ಸಂಜಾರ್ ಅವರು ಆಕ್ರಮಣಕಾರಿ ಪ್ರದರ್ಶನ ನೀಡಿದರು. ಕೊನೆಯ ಎರಡು ಸುತ್ತುಗಳಲ್ಲಿ ಮೇಲುಗೈ ಸಾಧಿಸಿ ಫೈನಲ್ ಪ್ರವೇಶಿಸಿದರು. ಸುಮಿತ್ ಅವರು 75 ಕೆ.ಜಿ. ವಿಭಾಗದ ಸೆಮಿಫೈನಲ್‌ನಲ್ಲಿ 05 ರಲ್ಲಿ ಉಜ್ಬೆಕಿಸ್ತಾನದ ಜಫರೋವ್ ಸೈದ್ಜಮ್ಶಿದ್ ಎದುರು ಸೋತರು. ಹಾಲಿ ಏಷ್ಯನ್ ಚಾಂಪಿಯನ್ ಆಗಿರುವ ಜಫರೊವ್‌ಗೆ ತಕ್ಕ ಪೈಪೋಟಿ ನೀಡಲು ಭಾರತದ ಬಾಕ್ಸರ್ ವಿಫಲರಾದರು.

ಭಾರತದ ಶಿವ ಥಾಪಾ (63.5 ಕೆ.ಜಿ), ಮೊಹಮ್ಮದ್ ಹುಸಾಮುದ್ದೀನ್ (57 ಕೆ.ಜಿ) ಮತ್ತು ನರೇಂದರ್ (92+ ಕೆ.ಜಿ) ಅವರೂ ಸೆಮಿಫೈನಲ್ನಲ್ಲಿ ಪೈಪೋಟಿ ನಡೆಸಲಿದ್ದಾರೆ. ಮಹಿಳೆಯರ ವಿಭಾಗದ ಫೈನಲ್ ಇಂದು: ಮಹಿಳೆಯರ ವಿಭಾಗದ ಫೈನಲ್ ಶುಕ್ರವಾರ ನಡೆಯಲಿದ್ದು, ಭಾರತದ ಐವರು ಬಾಕ್ಸರ್ಗಳು ಚಿನ್ನದ ಪದಕಕ್ಕಾಗಿ ತಮ್ಮ ಎದುರಾಳಿಗಳ ಜತೆ ಪೈಪೋಟಿ ನಡೆಸಲಿದ್ದಾರೆ. ಲವ್ಲಿನಾ ಬೊರ್ಗೊಹೈನ್ (75 ಕೆ.ಜಿ), ಪರ್ವೀನ್ (63 ಕೆ.ಜಿ), ಅಫಿಯಾ ಪಠಾಣ್ (81+ ಕೆ.ಜಿ), ಸ್ವೀಟಿ (81 ಕೆ.ಜಿ) ಮತ್ತು ಮೀನಾಕ್ಷಿ (52 ಕೆ.ಜಿ) ಅವರು ಫೈನಲ್ ಪ್ರವೇಶಿಸಿದ್ದಾರೆ.

ಮಹಿಳಾ ಟಿ20 ವಿಶ್ವಕಪ್‌ಗೆ ಮುನ್ನ ತ್ರಿಕೋನ ಸರಣಿ

ಜೋಹಾನ್ಸ್‌ಬರ್ಗ್: ಭಾರತ ಮಹಿಳಾ ತಂಡದವರು ಮುಂದಿನ ವರ್ಷ ದಕ್ಷಿಣ ಆಫ್ರಿಕಾದಲ್ಲಿ ನಡೆಯಲಿರುವ ಟಿ20 ಕ್ರಿಕೆಟ್ ವಿಶ್ವಕಪ್‌ಗೂ ಮುನ್ನ ತ್ರಿಕೋನ ಸರಣಿಯಲ್ಲಿ ಆಡಲಿದ್ದಾರೆ.

ವಿಶ್ವಕಪ್ ಟೂರ್ನಿ ಫೆ.10 ರಿಂದ 26ರ ವರೆಗೆ ಆಯೋಜನೆಯಾಗಿದೆ. ವಿಶ್ವಕಪ್‌ಗೆ ಪೂರ್ವಭಾವಿಯಾಗಿ ಜ.19 ರಿಂದ ಫೆ.2ರವರೆಗೆ ನಡೆಯಲಿರುವ ತ್ರಿಕೋನ ಸರಣಿಯಲ್ಲಿ ಭಾರತ ಅಲ್ಲದೆ, ಆತಿಥೇಯ ದಕ್ಷಿಣ ಆಫ್ರಿಕಾ ಹಾಗೂ ವೆಸ್ಟ್ ಇಂಡೀಸ್ ತಂಡಗಳು ಪಾಲ್ಗೊಳ್ಳಲಿವೆ. ಸರಣಿಯ ಎಲ್ಲ ಪಂದ್ಯಗಳು ದಕ್ಷಿಣ ಆಫ್ರಿಕಾದ ಈಸ್ಟ್ ಲಂಡನ್‌ನಲ್ಲಿರುವ ಬಫೆಲೊ ಪಾರ್ಕ್ ಕ್ರೀಡಾಂಗಣದಲ್ಲಿ ನಡೆಯಲಿವೆ ಎಂದು ಕ್ರಿಕೆಟ್ ದಕ್ಷಿಣ ಆಫ್ರಿಕಾ ಪ್ರಕಟಣೆ ತಿಳಿಸಿದೆ.

ಪ್ರತಿ ತಂಡಗಳು ತಲಾ ಎರಡು ಸಲ ಮುಖಾಮುಖಿಯಾಗಲಿದ್ದು, ಪಾಯಿಂಟ್ಸ್ ಪಟ್ಟಿಯಲ್ಲಿ ಮೊದಲ ಎರಡು ಸ್ಥಾನಗಳನ್ನು ಪಡೆಯುವ ತಂಡಗಳು ಫೈನಲ್ನಲ್ಲಿ ಎದುರಾಗಲಿವೆ. ಭಾರತ ಜ.19 ರಂದು ನಡೆಯಲಿರುವ ತನ್ನ ಮೊದಲ ಮೊದಲ ಪಂದ್ಯದಲ್ಲಿ ದಕ್ಷಿಣ ಆಫ್ರಿಕಾ ತಂಡವನ್ನು ಎದುರಿಸಲಿದೆ. ಆ ಬಳಿಕ ವೆಸ್ಟ್ ಇಂಡೀಸ್ (ಜ.23), ದಕ್ಷಿಣ ಆಫ್ರಿಕಾ (ಜ.28) ಮತ್ತು ವೆಸ್ಟ್ ಇಂಡೀಸ್ (ಜ.30) ವಿರುದ್ಧ ಆಡಲಿದೆ.

ಹಾಕಿ: ಎನ್‌ಐಇ ಕಾಲೇಜು ಚಾಂಪಿಯನ್

ಮೈಸೂರು: ಎನ್‌ಐಇ ಕಾಲೇಜು ತಂಡವು ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ವಲಯ ಮಟ್ಟದ ಪುರುಷರ ಹಾಕಿ ಟೂರ್ನಿಯಲ್ಲಿ ಕೊಡಗಿನ ಪೊನ್ನಂಪೇಟೆಯ ಕೂರ್ಗ್ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ತಂಡವನ್ನು ಪೆನಾಲ್ಟಿ ಶೂಟೌಟ್‌ನಲ್ಲಿ 3-1ರಿಂದ ಮಣಿಸಿ ಪ್ರಶಸ್ತಿ ಜಯಿಸಿತು. ಬುಧವಾರ ನಡೆದ ರೋಚಕ ಹಣಾಹಣಿಯಲ್ಲಿ ಉಭಯ ತಂಡಗಳು 11 ಗೋಲುಗಳ ಸಮ ಬಲ ಸಾಧಿಸಿ ದ್ದವು. ನಂತರ ನಡೆದ ಶೂಟೌಟ್‌ನಲ್ಲಿ ಕೊಡಗಿನ ತೀರ್ಥ ಕುಮಾರ್ ಒಂದು, ಎನ್‌ಐಇ ಕಾಲೇಜಿನ ಗುರುಪ್ರಸಾದ್, ಅಚಲ್ ಚೆಂಗಪ್ಪ ಹಾಗೂ ನಿಶಾನ್ ಚೆಂಡನ್ನು ನೆಟ್‌ಗೆ ಮುಟ್ಟಿಸುವ ಮೂಲಕ ಗೆಲುವು ತಂದು ಕೊಟ್ಟರು.

ಷೇರುಪೇಟೆ: ಸೆನ್ಸೆಕ್ಸ್ 420 ಅಂಶ ಇಳಿಕೆ

ಮುಂಬೈ: ಮಾರಾಟದ ಒತ್ತಡಕ್ಕೆ ಒಳಗಾಗಿ ದೇಶದ ಷೇರುಪೇಟೆಗಳ ವಹಿವಾಟು ಗುರುವಾರ ಇಳಿಕೆ ಕಂಡಿತು. ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 420 ಅಂಶ ಇಳಿಕೆಯಾಗಿ 61 ಸಾವಿರಕ್ಕಿಂತ ಕಡಿಮೆ ಮಟ್ಟದಲ್ಲಿ ವಹಿವಾಟು ಅಂತ್ಯಗೊಳಿಸಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 128 ಅಂಶ ಇಳಿಕೆಯಾಗಿ 18,028 ಅಂಶಗಳಿಗೆ ತಲುಪಿತು.

ಜಾಗತಿಕ ಮಾರುಕಟ್ಟೆಗಳಲ್ಲಿ ಕಂಡುಬಂದ ಮಾರಾಟದ ಒತ್ತಡದ ಜೊತೆಗೆ ಮಹೀಂದ್ರ, ಬಜಾಜ್ ಫಿನ್‌ಸರ್ವ್ ಮತ್ತು ರಿಲಯನ್ಸ್ ಇಂಡಸ್ಟ್ರೀಸ್ ಷೇರುಗಳು ಮೌಲ್ಯ ಇಳಿಕೆ ಸಹ ವಹಿವಾಟಿನ ಮೇಲೆ ಪರಿಣಾಮ ಬೀರಿತು. ಎಕ್ಸಿಸ್ ಬ್ಯಾಂಕ್ ಷೇರು ಮೌಲ್ಯ ಶೇ 3.54ರಷ್ಟು ಗರಿಷ್ಠ ಇಳಿಕೆ ಕಂಡಿತು.

ಏಷ್ಯಾದಲ್ಲಿ, ಶಾಂಘೈ, ಟೋಕಿಯೊ, ಸೋಲ್ ಮತ್ತು ಹಾಂಗ್ಕಾಂಗ್ ಷೇರುಪೇಟೆಗಳ ವಹಿವಾಟು ಇಳಿಕೆ ಕಂಡಿತು. ಯುರೋಪ್ನ ಮಾರುಕಟ್ಟೆಗಳು ನಕಾರಾತ್ಮಕ ವಹಿವಾಟು ನಡೆಸಿದವು. ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲ ದರ ಶೇ 0.06ರಷ್ಟು ಇಳಿಕೆ ಕಂಡು ಒಂದು ಬ್ಯಾರಲ್‌ಗೆ 92.59 ತಲುಪಿತು.

ಟೀಂ ಇಂಡಿಯಾ ಹಿರಿಯ ಆಟಗಾರರಿಗೆ ಕೊಕ್?

ಮುಂಬೈ: ಮುಂಬರುವ 24 ತಿಂಗಳುಗಳಲ್ಲಿ ಭಾರತದ ಟಿ20 ಕ್ರಿಕೆಟ್ ತಂಡದಲ್ಲಿ ಮಹತ್ತರ ಬದಲಾವಣೆಗೆ ಬಿಸಿಸಿಐ ಚಿಂತಿಸಿದೆ. ರೋಹಿತ್ ಶರ್ಮಾ, ವಿರಾಟ್ ಕೊಹ್ಲಿ, ಆರ್. ಅಶ್ವಿನ್ ಸೇರಿದಂತೆ ಹಿರಿಯ ಕ್ರಿಕೆಟಿಗರು ಕ್ರಮೇಣ ಚುಟುಕು ತಂಡದಿಂದ ಹೊರಗುಳಿಯಲಿದ್ದಾರೆ ಎಂದು ಬಿಸಿಸಿಐ ಮೂಲಗಳು ತಿಳಿಸಿವೆ.

ಆರ್. ಅಶ್ವಿನ್ ಮತ್ತು ದಿನೇಶ್ ಕಾರ್ತಿಕ್ ಅವರು ವಿಶ್ವಕಪ್ ಸರಣಿಯಲ್ಲಿ ಚುಟುಕು ಕ್ರಿಕೆಟ್ನ ಕೊನೆಯ ಪಂದ್ಯಗಳನ್ನು ಆಡಿದಂತೆ ತೋರುತ್ತಿದ್ದು, ರೋಹಿತ್ ಶರ್ಮಾ ಮತ್ತು ವಿರಾಟ್ ಕೊಹ್ಲಿಗೆ ಟಿ20 ಕ್ರಿಕೆಟ್‌ನಲ್ಲಿ ಮುಂದುವರಿಯುವ ಕುರಿತು ನಿರ್ಧಾರ ಕೈಗೊಳ್ಳುವ ನಿರ್ಧಾರವನ್ನು ಅವರಿಗೆ ಬಿಡಲು ಬಿಸಿಸಿಐ ಮುಂದಾಗಿದೆ ಎನ್ನಲಾಗಿದೆ.

ಸಂತೈಸಿದ ದ್ರಾವಿಡ್

ಟಿ20 ವಿಶ್ವಕಪ್ ಸೆಮಿಫೈನಲ್‌ನಲ್ಲಿ ಹೀನಾಯ ಸೋಲುಂಡ ಬಳಿಕ ತೀವ್ರ ಹತಾಶರಾಗಿದ್ದ ಭಾರತ ತಂಡದ ನಾಯಕ ರೋಹಿತ್ ಶರ್ಮಾ ಅವರನ್ನು ಕೋಚ್ ರಾಹುಲ್ ದ್ರಾವಿಡ್ ಸಂತೈಸಿದ್ದರು. ಮೂಲಗಳ ಮಾಹಿತಿಯನ್ನೇ ನಂಬುವುದಾದರೆ, ಮುಂದಿನ ಟಿ20 ವಿಶ್ವಕಪ್‌ಗೆ ಎರಡು ವರ್ಷ ಬಾಕಿ ಇದ್ದು, ಹಾರ್ದಿಕ್ ಪಾಂಡ್ಯ ನೇತೃತ್ವದಲ್ಲಿ ಹೊಸ ತಂಡ ರಚನೆಯಾಗಲಿದೆ. ಯಾರೊಬ್ಬರನ್ನೂ ನಿವೃತ್ತಿ ಪಡೆಯುವಂತೆ ಬಿಸಿಸಿಐ ಕೇಳಿಲ್ಲ. ಆದರೆ, ಹಿರಿಯ ಆಟಗಾರರು ಮುಂದಿನ ಟಿ20 ವಿಶ್ವಕಪ್ ದೃಷ್ಟಿಯಿಂದ ಟಿ20 ತಂಡದಿಂದ ಹೊರಬಂದು ಏಕದಿನ ಮತ್ತು ಟೆಸ್ಟ್ ಕ್ರಿಕೆಟ್‌ನತ್ತ ಗಮನ ಹರಿಸಲಿದ್ದಾರೆ ಎಂದು ಮೂಲಗಳು ತಿಳಿಸಿವೆ. ಹಿರಿಯ ಆಟಗಾರರು ನಿವೃತ್ತಿ ಘೋಷಿಸುವ ಅಗತ್ಯವಿಲ್ಲ. ಆದರೆ, ಮುಂಬರುವ ದಿನಗಳಲ್ಲಿ ಅವರು ಟಿ20 ತಂಡದಲ್ಲಿ ಅವಕಾಶ ಪಡೆಯುವುದಿಲ್ಲ ಎಂದು ಅದು ಹೇಳಿದೆ. ಆದರೆ, ಈ ಬಗ್ಗೆ ಈಗಲೇ ನಿರ್ಧರಿಸಲು ಸಮಯ ವಲ್ಲ ಎಂದು ಕೋಚ್ ದ್ರಾವಿಡ್ ಪಿಟಿಐಗೆ ತಿಳಿಸಿದ್ದಾರೆ.

Tracxn

ಟ್ರಾಕ್ಸನ್ ಟೆಕ್ನಾಲಜೀಸ್ ಲಿಮಿಟೆಡ್
(ಈ ಹಿಂದೆ "ಟ್ರಾಕ್ಸನ್ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್" ಎಂದಾಗಿತ್ತು
CIN: U72200KA2012PLC065294
ನೋಂ. ಕಚೇರಿ: ನಂ. ಎಲ್-248, 2ನೇ ಮಹಡಿ, 17ನೇ ಕ್ರಾಸ್, ಸೆಕ್ಟರ್ 6
ಹೆಚ್‌ಎಸ್‌ಆರ್ ಲೇಔಟ್, ಬೆಂಗಳೂರು, ಕರ್ನಾಟಕ-560102 ದೂ: +91 90360 90116,
ಇ-ಮೇಲ್: investor.relations@tracxn.com, ವೆಬ್‌ಸೈಟ್: www.tracxn.com

ಸೆಪ್ಟಂಬರ್ 30, 2022ಕ್ಕೆ ಅಂತ್ಯಗೊಂಡ ತ್ರೈಮಾಸಿಕ ಮತ್ತು ಅರ್ಧವಾರ್ಷಿಕಕ್ಕೆ ಅಂತ್ಯಗೊಂಡ ಅಪರಿಶೋಧಿತ ಆರ್ಥಿಕ ಫಲಿತಾಂಶಗಳ ಸಾರಾಂಶ

(ಎಲ್ಲಾ ಮೊತ್ತಗಳು ಲಕ್ಷ ರೂ.ಗಳಲ್ಲಿ, ಪ್ರತೀ ಷೇರಿನ ಗಳಿಕೆ, ಇವನ್ನು ಹೊರತು ಪಡಿಸಿ)

ಕ್ರ ಸಂ	ವಿವರಗಳು	ತ್ರೈಮಾಸಿಕ ಮುಕ್ತಾಯ			ಒಂಭತ್ತು ತಿಂಗಳ ಅವಧಿಗೆ ಮುಕ್ತಾಯ		ವಾರ್ಷಿಕ ಮುಕ್ತಾಯ
		ಸೆಪ್ಟಂಬರ್ 30 2022	ಜೂನ್ 30 2022	ಸೆಪ್ಟಂಬರ್ 30 2021	ಸೆಪ್ಟಂಬರ್ 30 2022	ಸೆಪ್ಟಂಬರ್ 30 2021	ಮಾರ್ಚ್ 31, 2022
		(ಅಪರಿಶೋಧಿತ)	(ಪರಿಶೋಧಿತ)	(ಅಪರಿಶೋಧಿತ)	(ಅಪರಿಶೋಧಿತ)	(ಪರಿಶೋಧಿತ)	(ಪರಿಶೋಧಿತ)
1	ಕಾರ್ಯಾಚರಣೆಗಳಿಂದ ಬಂದ ವರಮಾನ	1,910.83	1,840.45	1,490.39	3,751.28	2,987.60	6,345.35
2	ನಿವ್ವಳ ಲಾಭ/ (ನಷ್ಟ) (ತೆರಿಗೆ ಮೊದಲು ಅಸಾಧಾರಣ ವಸ್ತುಗಳು ಮತ್ತು/ ಅಥವಾ ವಿಶೇಷ ವಸ್ತುಗಳು)	182.51	83.59	(160.92)	266.10	(180.34)	(35.69)
3	ನಿವ್ವಳ ಲಾಭ/ (ನಷ್ಟ) (ತೆರಿಗೆ ನಂತರ ಅಸಾಧಾರಣ ವಸ್ತುಗಳು ಮತ್ತು/ ಅಥವಾ ವಿಶೇಷ ವಸ್ತುಗಳ ನಂತರ)	153.73	83.59	(482.90)	237.32	(554.92)	(484.77)
4	ನಿವ್ವಳ ಲಾಭ/ (ನಷ್ಟ) ತೆರಿಗೆ ನಂತರ (ಅಸಾಧಾರಣ ವಸ್ತುಗಳು ಮತ್ತು/ ಅಥವಾ ವಿಶೇಷ ವಸ್ತುಗಳ ನಂತರ)	153.73	83.59	(482.90)	237.32	(554.92)	(484.77)
5	ಅವಧಿಯ ಒಟ್ಟು ಸಮಗ್ರ ಆದಾಯ [ಲಾಭ/ (ನಷ್ಟ) ಅವಧಿಗೆ (ತೆರಿಗೆ ನಂತರ) ಮತ್ತು ಇತರ ಸಮಗ್ರ ಆದಾಯ (ತೆರಿಗೆ ನಂತರ)	152.48	92.34	(487.14)	244.83	(570.92)	(485.21)
6	ಈಕ್ವಿಟಿ ಪಾಲು ಬಂಡವಾಳ	1,003.10	1,003.10	981.28	1,003.10	981.28	1,003.10
7	ಮೀಸಲುಗಳು (ರಿವ್ಯಾಲ್ಯುವೇಶನ್ ಮೀಸಲು ಹೊರತುಪಡಿಸಿ) ಹಿಂದಿನ ವರ್ಷದ ಪರಿಶೋಧಿತ ಲೆಕ್ಕಪತ್ರದಲ್ಲಿ ತೋರಿಸಿದಂತೆ						1,061.01
8	ಪ್ರತಿ ಷೇರಿನ ಗಳಿಕೆ (ಪ್ರತಿಯೊಂದಕ್ಕೆ ರೂ.1/- ಮೂಲ ದುರ್ಬಲಗೊಳಿಸಿದ	0.15 0.14	0.08 0.07	(0.49) (0.49)	0.24 0.21	(0.57) (0.57)	(0.48) (0.48)

ಸೂಚನೆ:

1. ಮೇಲಿನವು ಸೆಪ್ಟಂಬರ್ 30, 2022ಕ್ಕೆ ಅಂತ್ಯಗೊಂಡ ತ್ರೈಮಾಸಿಕ ಮತ್ತು ಅರ್ಧವಾರ್ಷಿಕ ಅಂತ್ಯಗೊಂಡ ಹಣಕಾಸು ಫಲಿತಾಂಶಗಳ ಸಾರಾಂಶವಾಗಿದ್ದು, ಇವುಗಳನ್ನು ಆಡಿಟ್ ಕಮಿಟಿಯು ಪರಿಶೀಲನೆ ನಡೆಸಿದೆ ಮತ್ತು ನಿರ್ದೇಶಕ ಮಂಡಳಿಯ ಸಭೆಯು 09 ನವೆಂಬರ್ 2022ರಂದು ಅಂಗೀಕರಿಸಿದೆ. ಜೂನ್ 30, 2022 ಕ್ಕೆ ಕೊನೆಗೊಂಡತ್ರೈಮಾಸಿಕ ಮತ್ತು ಸೆಪ್ಟಂಬರ್ 30, 2021ಕ್ಕೆ ಕೊನೆಗೊಂಡ ಅರ್ಧವರ್ಷದ ಅಂಕಿಅಂಶಗಳನ್ನು ಶಾಸನಬದ್ಧ ಅಂಕಿಅಂಶಗಳನ್ನು ಶಾಸನಬದ್ಧ ಲೆಕ್ಕಪರಿಶೋಧಕರು ಆಡಿಟ್‌ಗೆ ಒಳಪಟ್ಟಿರುವ ವಿಶೇಷ ಉದ್ದೇಶದ ಹಣಕಾಸು ಹೇಳಿಕೆಗಳಿಂದ ಪಡೆಯಲಾಗಿದೆ. ಇದಲ್ಲದೆ, ಸೆಪ್ಟಂಬರ್ 30, 2021 ಕ್ಕೆ ಕೊನೆಗೊಂಡ ತ್ರೈಮಾಸಿಕದ ಸಂಖ್ಯೆಗಳು ಆಡಳಿತಮಂಡಳಿಯಿಂದ ಒದಗಿಸಲ್ಪಟ್ಟಿದೆ ಮತ್ತುಶಾಸನಬದ್ಧ ಪರಿಶೋಧಕರಿಂದ ಪರಿಶೀಲನೆಗೆ ಒಳಪಟ್ಟಿಲ್ಲ. ಹೇಳಲಾದ ಹಣಕಾಸು ಫಲಿತಾಂಶಗಳ ಸಂಪೂರ್ಣ ವಿವರವು ಕಂಪನಿಯ ಷೇರುಗಳನ್ನು ಪಟ್ಟಿಮಾಡಲಾದ ಕಂಪನಿಯ ವೆಬ್‌ಸೈಟ್ (www.tracxn.com) ಮತ್ತು ನ್ಯಾಷನಲ್ ಸ್ಟಾಕ್ ಎಕ್ಸ್‌ಚೇಂಜ್ ಆಫ್ ಇಂಡಿಯಾ ಲಿಮಿಟೆಡ್ (www.nseindia.com) ಮತ್ತು ಬಿಎಸ್‌ಇ ಲಿಮಿಟೆಡ್ (www.bseindia.com) ನಲ್ಲಿ ಲಭ್ಯವಿದೆ.
2. ಸೆಪ್ಟಂಬರ್ 30, 2022 ಕ್ಕೆ ಕೊನೆಗೊಂಡ ತ್ರೈಮಾಸಿಕದಲ್ಲಿ ರೂ.28.78 ಲಕ್ಷಗಳ ಮೊತ್ತದ ಅಸಾಧಾರಣ ವಸ್ತುಗಳ ಅಡಿಯಲ್ಲಿ ವರ್ಗೀಕರಿಸಲಾದ ಐಪಿಒ ವೆಚ್ಚಗಳಿಗೆ ಸಂಬಂಧಿಸಿದಂತೆ ಸೆಪ್ಟಂಬರ್ 30, 2022 ರವರೆಗೆ ಒಟ್ಟು ರೂ.477.86 ಲಕ್ಷಗಲನ್ನು ವೆಚ್ಚವೆಂದು ಗುರುತಿಸಲಾಗಿದೆ. ಮತ್ತು ಐಪಿಒ ಯನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದ ಮೇಲೆ ಮಾರಾಟ ಮಾಡುವ ಷೇರುದಾರರಿಂದ ಮರುಪಡೆಯಬಹುದಾಗಿದೆ. ಈ ವೆಚ್ಚಗಳನ್ನು ಈಗ ಮಾರಾಟದ ಷೇರುದಾರರಿಂದ ಪೋಸ್ಟ್ ಪಟ್ಟಿಯಿಂದ ಮರುಪಡೆಯಲಾಗುತ್ತದೆ.
3. ಅವಶ್ಯವಿದ್ದೆಡೆ ಪ್ರಸಕ್ತ ಅಕೌಂಟಿಂಗ್ ಟ್ರೀಟ್‌ಮೆಂಟ್‌ಗೆ ಈ ಹಿಂದಿನ ಅವಧಿ/ವರ್ಷದ ಅಂಕಿಅಂಶಗಳನ್ನು ಮರು ವರ್ಗೀಕರಿಸಿ/ಮರುಗುಂಪಾಗಿಸಲಾಗಿದೆ.

ನಿರ್ದೇಶಕ ಮಂಡಳಿಯ ಪರವಾಗಿ
ಸಹಿ/-
ನೇಹಾ ಸಿಂಗ್
ವ್ಯವಸ್ಥಾಪಕ ನಿರ್ದೇಶಕರು ಮತ್ತು ಅಧ್ಯಕ್ಷರು
(ಡಿಐಎನ್ : 05331824)

ಸ್ಥಳ: ಬೆಂಗಳೂರು
ದಿನಾಂಕ: ನವೆಂಬರ್ 09, 2022

ಅನುಬಂಧ IV
[ನೋಡಿ ನಿಯಮ 8 (1)]
ಸ್ವಾಧೀನ ಸೂಚನೆ
(ಸ್ಥಿರ ಆಸ್ತಿಗಾಗಿ)

ಈ ಕಾರಣದಿಂದ:

ಇಂಡಿಯಾಬುಲ್ಸ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್ (CIN:L65922DL2005PLC136029) ನ ಅಧಿಕಾರ ಕೊಟ್ಟಿರುವ ಅಧಿಕಾರಿಯ ಹಸ್ತಾಕ್ಷರವಿರುವ ಐಹಿಕತೆ ಮತ್ತು ಪುನರ್ ನಿರ್ಮಾಣ ಮತ್ತು ಫೈನಾನ್ಸ್‌ನ ಸಾಲ ತೀರಿಸಲು ಇರುವ ಸ್ವತ್ತು ಮತ್ತು ಎನ್‌ಫೋರ್ಸ್‌ಮೆಂಟ್ ಅಫ್ ಸೆಕ್ಯೂರಿಟೀಸ್ ಆಕ್ಟ್2002 ಮತ್ತು ಅಧಿಕಾರದ ಪ್ರಯೋಗ ಮಾಡುವಿಕೆಯ ಸೆಕ್ಷನ್ 13 (12) ನಿಯಮ 3 ರ ಸೆಕ್ಯೂರಿಟೀಸ್ (ಎನ್‌ಫೋರ್ಸ್‌ಮೆಂಟ್) ನಿಯಮ, 2002 ದೊಂದಿಗೆ ಓದಿರಿ. ಬೇಡಿಕಯ ಸೂಚನೆ ಮುಲಕ ಪ್ರಕಟಿಸಿದ ತಾರೀಖು **25.07.2022** ರಂದು ಕರೆದು ಸಾಲಗಾರ **ರಾಕೇಶ್ ಸೆಂಚಾ ಮತ್ತು ರೂಪಾ ರಾಮ್ ಸೆಂಚಾ** ನೋಟಿಸಿನಲ್ಲಿ ಹೇಳಿರುವಂತೆ ಮರುಪಾವತಿಸಬೇಕಾದ **ರೂ. 41,35,768.24 (ರೂಪಾಯಿ ನಲ್ವತ್ತ ಒಂದು ಲಕ್ಷದ ಮೂವತ್ತ ಐದು ಸಾವಿರದ ಏಳು ನೂರ ಅರುವತ್ತ ಎಂಟು ಮತ್ತು ಪೈಸೆ ಇಪ್ಪತ್ತ ನಾಲ್ಕು ಮಾತ್ರ)** ಸಾಲ ಖಾತೆ ನಂ. **HHLMYS00508449** ಈ ಲೋನ್ ಅಕೌಂಟ್‌ಗೆ ಸಂಬಂಧಿಸಿದಂತ, ಹೇಳಲಾಗಿರುವ ನೋಟಿಸ್ ನಿಮ್ಮನ್ನುತಲುಪಿ 60 ದಿನಗಳಾಗುವುದರೊಳಗೆ **15.07.2022** ರ ವರೆಗಿನ ಮೊತ್ತ ಮತ್ತು ಅದರ ಮೇಲಿನ ಬಡ್ಡಿ.

ಸಾಲಗಾರರು ಸಾಲ ಮರುಪಾವತಿಸಲು ವಿಫಲವಾದ ಕಾರಣ ಕೆಳಗೆ ತಿಳಿಸಿರುವ **ಆಸ್ತಿಯ ಸ್ವಾಧೀನ**ವನ್ನು ಅಧಿಕಾರ ಪ್ರಯೋಗ ಮಾಡುವ ಸೆಕ್ಷನ್ 13(4)ರ ಆಕ್ಟ್‌ನ ನಿಯಮ 8 ರೂಂದಿಗೆ ಓದಿ ತಿಳಿಸಿರುವ ನಿಯಮದ ಪ್ರಕಾರ ದಿನಾಂಕ **07.11.2022** ರಂದು ಮಾಡಲಾಗಿದೆ ಎಂದು ಸಾಲಗಾರನಿಗೆ ಮತ್ತು ಸಾರ್ವಜನಿಕವಾಗಿ ತಿಳಿಯಪಡಿಸಲಾಗುವುದು.

ಪ್ರತ್ಯೇಕವಾಗಿ ಸಾಲಗಾರರಿಗೆ ಮತ್ತು ಸರ್ವಸಾಮಾನ್ಯವಾದ ಸಾರ್ವಜನಿಕರ ಎಚ್ಚರಿಕೆಗಾಗಿ ಯಾವುದೇ ತರಹದ ಅಸ್ತಿ ವ್ಯವಹಾರವು ಮಾಡದಿರಲು ಮತ್ತು ಆಸ್ತಿಯಲ್ಲಿನ ಯಾವುದೇ ವ್ಯವಹಾರವು **ಇಂಡಿಯಾಬುಲ್ಸ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್‌ನ** ಬಾಕಿ ಇರುವ ಮೊತ್ತ **ರೂ. 41,35,768.24 (ರೂಪಾಯಿ ನಲ್ವತ್ತ ಒಂದು ಲಕ್ಷದ ಮೂವತ್ತ ಐದು ಸಾವಿರದ ಏಳು ನೂರ ಅರುವತ್ತ ಎಂಟು ಮತ್ತು ಪೈಸೆ ಇಪ್ಪತ್ತ ನಾಲ್ಕು ಮಾತ್ರ) 15.07.2022** ವರೆಗಿನ ಮೊತ್ತ ಮತ್ತು ಜೊತೆಗೆ ಅದರ ಮೇಲಿನ ಬಡ್ಡಿಗೆ ಒಳಪಟ್ಟಿದೆ.

ಸೆಕ್ಯೂರ್ಡ್ ಆಸ್ತಿಗಳನ್ನು ರಿಡೀಮ್ ಮಾಡಲು ಉಪಲಬ್ದವಿರುವ ಸಮಯದ ಬಗ್ಗೆ ಸಾಲಗಾರರ ಗಮನವನ್ನು ಕಾಯ್ದೆಯ ಸೆಕ್ಷನ್ 13ರ ಉಪ-ಸೆಕ್ಷನ್ (8) ಪ್ರಾವಧಾನಗಳತ್ತ ಸೆಳೆಯಲಾಗುತ್ತದೆ.

ಸ್ಥಿರಾಸ್ತಿಯ ವರ್ಣನೆ

2ನೇ ಹಂತ, 2ನೇ ಫೇಸ್, ದೇವನೂರು ಎಕ್ಸ್‌ಟೆನ್ಶನ್, ರಾಜೀವ್ ನಗರ, ಎನ್.ಆರ್ ಮೊಹಲ್ಲಾ, ಮೈಸೂರು -570019, ಕರ್ನಾಟಕ ಇಲ್ಲಿ ನಂ.2489 ಹೊಂದಿರುವ ವಾಸ್ತವ್ಯದ ಮೆನಯ ಆ ಎಲ್ಲಾ ತುಂಡು ಮತ್ತು ಪಾರ್ಸೆಲ್, ಪೂರ್ವದಿಂದ ಪಶ್ಚಿಮಕ್ಕೆ 9.00 ಮೀಟರ್ ಮತ್ತು ಉತ್ತರದಿಂದ ದಕ್ಷಿಣಕ್ಕೆ 6.00 ಮೀಟರ್ ಮಾಪನ ಹೊಂದಿದ್ದು ಒಟ್ಟು 54 ಚದರ ಮೀಟರ್ ಮಾಪನದ್ದಾಗಿದೆ ಮತ್ತು ತಳ ಮಹಡಿಯಲ್ಲಿ ನಿರ್ಮಿಸಲಾದ 5.00 ಚದರ ಅಡಿ ಪ್ಲಿಂತ್ ಏರಿಯಾ ಮತ್ತು ಮೊಸಾಯಿಕ್ ಫ್ಲೋರಿಂಗ್‌ನೊಂದಿಗೆ ಮನೆಯ 1ನೇ ಮಹಡಿಯ ಆರ್.ಸಿ.ಸಿ. ರೂಫ್‌ನ 5.00 ಚದರ ಅಡಿ ಏರಿಯಾವನ್ನು ಹೊಂದಿದೆ ಮತ್ತು ಈ ಕೆಳಗಿನಂತೆ ಸುತ್ತುವರಿಯಲ್ಪಟ್ಟಿದೆ:

ಪೂರ್ವ : ನಂ.2498 ಹೊಂದಿರುವ ಸ್ವತ್ತು
ಪಶ್ಚಿಮ : 9 ಮೀಟರ್ ರಸ್ತೆ
ಉತ್ತರ : ನಂ.2488 ಹೊಂದಿರುವ ಸ್ವತ್ತು
ದಕ್ಷಿಣ : ನಂ.2490 ಹೊಂದಿರುವ ಸ್ವತ್ತು

ದಿನಾಂಕ : 07.11.2022
ಸ್ಥಳ : ಮೈಸೂರು
ಅಧಿಕಾರವಿರುವ ಅಧಿಕಾರಿ
ಇಂಡಿಯಾಬುಲ್ಸ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್

ಅನುಬಂಧ IV
[ನೋಡಿ ನಿಯಮ 8 (1)]
ಸ್ವಾಧೀನ ಸೂಚನೆ
(ಸ್ಥಿರ ಆಸ್ತಿಗಾಗಿ)

ಈ ಕಾರಣದಿಂದ:

ಇಂಡಿಯಾಬುಲ್ಸ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್ (CIN:L65922DL2005PLC136029) ನ ಅಧಿಕಾರ ಕೊಟ್ಟಿರುವ ಅಧಿಕಾರಿಯ ಹಸ್ತಾಕ್ಷರವಿರುವ ಐಹಿಕತೆ ಮತ್ತು ಪುನರ್ ನಿರ್ಮಾಣ ಮತ್ತು ಫೈನಾನ್ಸ್‌ನ ಸಾಲ ತೀರಿಸಲು ಇರುವ ಸ್ವತ್ತು ಮತ್ತು ಎನ್‌ಫೋರ್ಸ್‌ಮೆಂಟ್ ಅಫ್ ಸೆಕ್ಯೂರಿಟೀಸ್ ಆಕ್ಟ್2002 ಮತ್ತು ಅಧಿಕಾರದ ಪ್ರಯೋಗ ಮಾಡುವಿಕೆಯ ಸೆಕ್ಷನ್ 13 (12) ನಿಯಮ 3 ರ ಸೆಕ್ಯೂರಿಟೀಸ್ (ಎನ್‌ಫೋರ್ಸ್‌ಮೆಂಟ್) ನಿಯಮ, 2002 ದೊಂದಿಗೆ ಓದಿರಿ. ಬೇಡಿಕಯ ಸೂಚನೆ ಮುಲಕ ಪ್ರಕಟಿಸಿದ ತಾರೀಖು **28.05.2021** ರಂದು ಕರೆದು ಸಾಲಗಾರ **ಜೈಕುಮಾರ್, ಸಾಗರಿಕಾ, ನೇಹಾ ಓರ್ಝಾ ಮತ್ತು ಬ್ರಿಜೇಂದ್ರ ಓರ್ಝಾ** ನೋಟಿಸಿನಲ್ಲಿ ಹೇಳಿರುವಂತೆ ಮರುಪಾವತಿಸಬೇಕಾದ **ರೂ. 23,33,184.53 (ರೂಪಾಯಿ ಇಪ್ಪತ್ತ ಮೂರು ಲಕ್ಷದ ಮೂವತ್ತ ಮೂರು ಸಾವಿರದ ಒಂದು ನೂರ ಎಂಬತ್ತ ನಾಲ್ಕು ಮತ್ತು ಪೈಸೆ ಐವತ್ತ ಮೂರು ಮಾತ್ರ)** ಸಾಲ ಖಾತೆ ನಂ. **HHEBAG00269894** ಈ ಲೋನ್ ಅಕೌಂಟ್‌ಗೆ ಸಂಬಂಧಿಸಿದಂತ, ಹೇಳಲಾಗಿರುವ ನೋಟಿಸ್ ನಿಮ್ಮನ್ನುತಲುಪಿ 60 ದಿನಗಳಾಗುವುದರೊಳಗೆ **24.05.2021** ರ ವರೆಗಿನ ಮೊತ್ತ ಮತ್ತು ಅದರ ಮೇಲಿನ ಬಡ್ಡಿ.

ಸಾಲಗಾರರು ಸಾಲ ಮರುಪಾವತಿಸಲು ವಿಫಲವಾದ ಕಾರಣ ಕೆಳಗೆ ತಿಳಿಸಿರುವ **ಸ್ವಾಧೀನ**ವನ್ನು ಅಧಿಕಾರ ಪ್ರಯೋಗ ಮಾಡುವ ಸೆಕ್ಷನ್ 13(4)ರ ಆಕ್ಟ್‌ನ ನಿಯಮ 8 ರೂಂದಿಗೆ ಓದಿ ತಿಳಿಸಿರುವ ನಿಯಮದ ಪ್ರಕಾರ ದಿನಾಂಕ **07.11.2022** ರಂದು ಮಾಡಲಾಗಿದೆ ಎಂದು ಸಾಲಗಾರನಿಗೆ ಮತ್ತು ಸಾರ್ವಜನಿಕವಾಗಿ ತಿಳಿಯಪಡಿಸಲಾಗುವುದು.

ಪ್ರತ್ಯೇಕವಾಗಿ ಸಾಲಗಾರರಿಗೆ ಮತ್ತು ಸರ್ವಸಾಮಾನ್ಯವಾದ ಸಾರ್ವಜನಿಕರ ಎಚ್ಚರಿಕೆಗಾಗಿ ಯಾವುದೇ ತರಹದ ಅಸ್ತಿ ವ್ಯವಹಾರವು ಮಾಡದಿರಲು ಮತ್ತು ಆಸ್ತಿಯಲ್ಲಿನ ಯಾವುದೇ ವ್ಯವಹಾರವು **ಇಂಡಿಯಾಬುಲ್ಸ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್‌ನ** ಬಾಕಿ ಇರುವ ಮೊತ್ತ **ರೂ. 23,33,184.53 (ರೂಪಾಯಿ ಇಪ್ಪತ್ತ ಮೂರು ಲಕ್ಷದ ಮೂವತ್ತ ಮೂರು ಸಾವಿರದ ಒಂದು ನೂರ ಎಂಬತ್ತ ನಾಲ್ಕು ಮತ್ತು ಪೈಸೆ ಐವತ್ತ ಮೂರು ಮಾತ್ರ) 24.05.2021** ವರೆಗಿನ ಮೊತ್ತ ಮತ್ತು ಜೊತೆಗೆ ಅದರ ಮೇಲಿನ ಬಡ್ಡಿಗೆ ಒಳಪಟ್ಟಿದೆ.

ಸೆಕ್ಯೂರ್ಡ್ ಆಸ್ತಿಗಳನ್ನು ರಿಡೀಮ್ ಮಾಡಲು ಉಪಲಬ್ದವಿರುವ ಸಮಯದ ಬಗ್ಗೆ ಸಾಲಗಾರರ ಗಮನವನ್ನು ಕಾಯ್ದೆಯ ಸೆಕ್ಷನ್ 13ರ ಉಪ-ಸೆಕ್ಷನ್ (8) ಪ್ರಾವಧಾನಗಳತ್ತ ಸೆಳೆಯಲಾಗುತ್ತದೆ.

ಸ್ಥಿರಾಸ್ತಿಯ ವರ್ಣನೆ

ಫ್ಲ್ಯಾಟ್ ನಂ. 201, ಎರಡನೇ ಮಹಡಿ, ಸಾಯಿ ಮೆಡೋಸ್, ಇಲ್ಲಿರುವಂಥಾದ್ದು: ಕಟ್ಟಿಗೆನಹಳ್ಳಿ ಗ್ರಾಮ, ಜಾಲ ಹೋಬಳಿ, ಬೆಂಗಳೂರು ಉತ್ತರ ತಾಲೂಕು, ಬೆಂಗಳೂರು-560064, ಕರ್ನಾಟಕ, ಇದು ಈ ಕೆಳಗಿನಂತೆ ಸುತ್ತವರಿಯಲ್ಪಟ್ಟಿದೆ:

ಪೂರ್ವ : ಹಕ್ಕುಪತ್ರದ ಪ್ರಕಾರ
ಪಶ್ಚಿಮ : ಹಕ್ಕುಪತ್ರದ ಪ್ರಕಾರ
ಉತ್ತರ : ಹಕ್ಕುಪತ್ರದ ಪ್ರಕಾರ
ದಕ್ಷಿಣ : ಹಕ್ಕುಪತ್ರದ ಪ್ರಕಾರ

ದಿನಾಂಕ : 07.11.2022
ಸ್ಥಳ : ಬೆಂಗಳೂರು
ಅಧಿಕಾರವಿರುವ ಅಧಿಕಾರಿ
ಇಂಡಿಯಾಬುಲ್ಸ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್

PUBLIC NOTICE

This is to inform the General Public that **MR.S.PAVAN KUMAR & MRS.MARY ELIZABETH.S** are the owners of Item No.1 mentioned in the schedule hereunder and **SMT.G.ASWINI KUMAR, SMT.S.LATHA, SRI.G.SHASHIKUMAR, SRI.G.BHANUKUMAR AND SMT.VEENA VIJAY ALL ARE CHILDREN OF LATE GOPALA KRISHNA.G** are the owner of Item No.2 mentioned in the schedule hereunder and my client **SRI.MANGALARAM SEERVI** is intending to purchase the same. In case anybody having claim/s, or objection/s may lodge their claims/objections with documentary proof, to the undersigned within **SEVEN DAYS** from the date of publication of this notice.

SCHEDULE PROPERTY

Item No.1 :

All that piece and parcel of immovable Property bearing Eastern Portion of Site No.6, Old Property No.32, New Property No.95, Khatha No.2004, situated at Yerrayyana Palya, Kowdenahalli, Ramamurthynagar, Krishnarajapura Hobli, Bangalore East Taluk, erstwhile Bangalore South Taluk, now coming under the Jurisdiction of Bruhat Bangalore Mahanagara Palike (BBMP) Ward No.26, previously comes under the limits of Krishnarajapura CMC Bangalore, measuring east to west 30 feet and north to south 40 feet, in all measuring 1200 Square feet and bounded on the:

East by : Conservancy Lane,
West by : Western Portion of Site No.6 retained with the Vendors,
North by : Site No.12,
South by : Banaswadi Road

Item No.2 :

All that piece and parcel of immovable Property bearing Eastern Portion of Site No.12, Old Property No.32, New Property No.95, Khatha No.2004, situated at Yerrayyana Palya, Kowdenahalli, Ramamurthynagar, Krishnarajapura Hobli, Bangalore East Taluk, erstwhile Bangalore South Taluk, now coming under the Jurisdiction of Bruhat Bangalore Mahanagara Palike (BBMP) Ward No.26, previously comes under the limits of Krishnarajapura CMC Bangalore, measuring east to west 30 feet and north to south 40 feet, in all measuring 1200 Square feet and bounded on the:

East by : Conservancy Lane,
West by : Western Portion of Site No.12 retained with the Vendors,
North by : Private Property,
South by : Site No.6

N. JAGADEESH KUMAR, Advocate,
No.276, 2nd Floor, 1st Main Road,
Chamarajpet, Bangalore-560018.